ಡಿ.ಡಬ್ಲೂ-1

**ದಿನಾಂಕಃ 23-06-2026 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 1 ನೇ ಪ್ರತಿವಾದಿ ಪರ ಶ್ರೀ ಬಿ ಆರ್ ಪಿ ವಕೀಲರಿಂದಃ**

1) ಸರ್ವೆ ನಂ. 61/1 ಹಿಸ್ಸಾ 1 ಬಿ ಪಹಣಿಯ ದೃಢಿಕೃತ ನಕಲನ್ನು ನಿಡಿ-1 ಎಂದು,
2) ದಿನಾಂಕ 23-08-1999 ರ ಕ್ರಯಪತ್ರದ ದೃಢಿಕೃತ ನಕಲನ್ನು ನಿಡಿ-2 ಎಂದು,
3) ಮ್ಯುಟೇಶನ್ ನಕಲನ್ನು ನಿಡಿ-3 ಎಂದು,
4) ಸರ್ವೆ ನಂ. 61/1 ಹಿಸ್ಸಾ 1 ಬಿ ರ 2001-02 ರಿಂದ 2019-20 ರ ಸಾಲಿನ ಪಹಣಿಗಳನ್ನು ಒಟ್ಟಾಗಿ ನಿಡಿ-4 ಎಂದು,
5) ಸರ್ವೇ ನಂ. 61/1 ಹಿಸ್ಸಾ 1 ರ 2020-21 ರಿಂದ 2025-26 ರ ಸಾಲಿನ ಪಹಣಿಗಳನ್ನು ಒಟ್ಟಾಗಿ ನಿಡಿ-5 ಎಂದು,
6) ಭೂಹಿಡುವಳಿ ಪ್ರಮಾಣ ಪತ್ರವನ್ನು ನಿಡಿ-6 ಎಂದು,
7) ಗೇಣಿ ರಹಿತ ದೃಢಿಕರಣ ಪತ್ರವನ್ನು ನಿಡಿ-7 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಇಲ್ಲ.**

**ಪಾಟೀ ಸವಾಲಃ ವಾದಿ ಪರ ಶ್ರೀ ಎಮ್ ಎಮ್ ಎಮ್ ವಕೀಲರಿಂದಃ**

1. ನನಗೆ ಓದಲು, ಬರೆಯಲು ಬರುತ್ತದೆ. ನನ್ನ ತಂದೆಯ ಮನೆತನದ ವಂಶಾವಳಿ ನನಗೆ ಗೊತ್ತಿದೆ. ನನ್ನ ತಂದೆಯ ಹೆಸರು ಗೋವಿಂದಗೌಡ. ನನ್ನ ತಂದೆಗೆ ಹೊನ್ನನಗೌಡ, ದ್ಯಾಮನಗೌಡ ಇಬ್ಬರೂ ಅಣ್ಣಂದಿರು. ದ್ಯಾಮಣಗೌಡನ ಹೆಂಡತಿಯ ಹೆಸರು ಗೊತ್ತಿಲ್ಲ, ದ್ಯಾಮಣಗೌಡನಿಗೆ ಒಬ್ಬ ಮಗ ಹುಟ್ಟಿದ್ದ, ಆತನು ಸಹ ಸತ್ತಿದ್ದಾನೆ ಹಾಗೂ ದ್ಯಾಮಣಗೌಡನು ಸಹ ಸತ್ತಿದ್ದಾನೆ. ಹೊನ್ನನಗೌಡ ಸತ್ತಿರುತ್ತಾನೆ. ಹೊನ್ನನಗೌಡನ ಹೆಂಡತಿ ಹೊಳಿಯಮ್ಮ ಸಹ ಸತ್ತಿರುತ್ತಾಳೆ. ಹೊನ್ನನಗೌಡನಿಗೆ ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರೂ ಗಂಡು ಮಕ್ಕಳು, ಅವರ ಹೆಸರು ದೇವಮ್ಮ,

ಹನಮಮ್ಮ, ಪಾರಮ್ಮ, ಪುಟ್ಟನಗೌಡ, ಚಂದನಗೌಡ. ಚಂದನಗೌಡ ಮತ್ತು ಪುಟ್ಟನಗೌಡ ಇಬ್ಬರೂ ಸತ್ತಿರುತ್ತಾರೆ. ಪಾರಮ್ಮನನ್ನು ಮತ್ತು ಹನಮಮ್ಮನನ್ನು ಚಿಕ್ಕನಂದಿಹಾಳ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ದೇವಮ್ಮನನ್ನು ಯಲಬುರ್ತಿ ಗ್ರಾಮಕ್ಕೆ ಚಂದಪ್ಪ ಜರಕುಂಟಿ ಅವರಿಗೆ ಮದುವೆ ಮಾಡಿಕೊಟ್ಟಿರುತ್ತದೆ. ನನ್ನ ತಂದೆಗೆ ನಾನು ಮತ್ತು ವಾದಿ ಪಾರಮ್ಮ ಇಬ್ಬರೇ ಹೆಣ್ಣು ಮಕ್ಕಳು.

2. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಊರು ಯಲಬುರ್ತಿ. ನನ್ನ ತಂದೆ ಮತ್ತು ಅವರ ಅಣ್ಣ-ತಮ್ಮಂದಿರಿಗೆ ಒಟ್ಟು 16 ಎಕರೆ ಜಮೀನು ಯಲಬುರ್ತಿಯಲ್ಲಿ ಇತ್ತು. ಆ 3 ಜನ ಅಣ್ಣ-ತಮ್ಮಂದಿರು ಹೊಲ ಸಮನಾಗಿ ಪಾಲು ಮಾಡಿಕೊಂಡಿದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ 16 ಎಕರೆ ಜಮೀನನ್ನು ನನ್ನ ದೊಡ್ಡಪ್ಪ ಹೊನ್ನನಗೌಡನ ವಾರಸುದಾರರು ಉಪಭೋಗ ಮಾಡುತ್ತಿದ್ದಾರೆ.

3. ನನ್ನ ತಾಯಿಯ ತವರು ಮನೆ ಕುಷ್ಟಗಿ ತಾಲೂಕಿನ ಶಾಖಾಪೂರ ಗ್ರಾಮ. ನನ್ನ ತಾಯಿಯ ವಂಶಾವಳಿ ನನಗೆ ಗೊತ್ತಿದೆ. ನನ್ನ ತಾಯಿಯ ತಂದೆಯ ಹೆಸರು ದ್ಯಾಮಣ್ಣ, ಮತ್ತು ತಾಯಿಯ ಹೆಸರು ಭೀಮವ್ವ. ಸದರಿ ದ್ಯಾಮಣ್ಣ ಮತ್ತು ಭೀಮವ್ವರಿಗೆ ಹನಮಪ್ಪ, ಕರಿಯಪ್ಪ, ಹನಮವ್ವ, ಶಾವಂತ್ರವ್ವ, ಯಲ್ಲವ್ವ ಅಂದರೆ ನನ್ನ ತಾಯಿ, ಗೌರವ್ವ ಮಕ್ಕಳು. ಸದರಿಯವರ ಪೈಕಿ ನನ್ನ ತಾಯಿ ಮತ್ತು ಶಾವಂತ್ರವ್ವ ಜೀವಂತ ಇದ್ದಾರೆ, ಉಳಿದವರು ಮರಣ ಹೊಂದಿರುತ್ತಾರೆ. ಶಾವಂತ್ರವ್ವನನ್ನು ಹಿರೇನಂದಿಹಾಳ ಗ್ರಾಮದ ಬಸನಗೌಡ ಮಾಲಿಪಾಟೀಲ ಅವರಿಗೆ ಮದುವೆ ಮಾಡಿಕೊಟ್ಟಿದೆ. ಕರಿಯಪ್ಪನ ಹೆಂಡತಿಯ ಹೆಸರು ಶರಣವ್ವ, ಅವರು ಕೂಡ ಹಿರೇನಂದಿಹಾಳ ಗ್ರಾಮದಲ್ಲಿ ಇರುತ್ತಾರೆ. ನಮ್ಮ ಮನೆತನದ ವಿಚಾರ ಶಾವಂತ್ರವ್ವನಿಗೆ ಮತ್ತು ಶರಣವ್ವಳಿಗೆ ಗೊತ್ತಿದೆ ಎಂದರೆ ಸರಿಯಲ್ಲ.

4. ನಾನು ಮತ್ತು ನನ್ನ ತಂಗಿ ಶಾಖಾಪೂರದಲ್ಲಿ ನನ್ನ ತಾಯಿಯ ಸಹೋದರ ಕರಿಯಪ್ಪನ ಮನೆಯಲ್ಲಿ ಬೆಳೆದಿರುತ್ತೇವೆ ಎಂದರೆ ಸರಿ. ನಾವು ಚಿಕ್ಕವರಿರುವ ಕಾಲಕ್ಕೆ ನನ್ನ ತಂದೆ ತೀರಿಕೊಂಡ ಕಾರಣ ನಾವು ಸೋದರಮಾವನ ಮನೆಯಲ್ಲಿ ಬೆಳೆದಿರುತ್ತೇವೆ. ಮುಂದೆ ಜೀವನ ಕಷ್ಟ ಆದ ಕಾರಣ ನನ್ನ ತಂದೆಯ ಭಾಗವನ್ನು ನನ್ನ ತಾಯಿ ಪಡೆದುಕೊಳ್ಳಲು ಹೋರಾಟ ಮಾಡಿರುತ್ತಾಳೆ ಎಂದರೆ ಸರಿ. ಆಗ ನಾನು ಮತ್ತು ನನ್ನ ತಂಗಿ ಚಿಕ್ಕವರು ಇದ್ದೇವು. ನಮ್ಮ ಪರವಾಗಿ ನಮ್ಮ ತಾಯಿ ಹೋರಾಟ ಮಾಡಿರುತ್ತಾಳೆ. ನಮ್ಮ ಪರವಾಗಿ ನಮ್ಮ ತಾಯಿ ಓ.ಎಸ್ 54/1984 ದಾವೆ ದಾಖಲಿಸಿದ್ದಳು ಎಂದರೆ ಸರಿ. ಆ ದಾವೆಯಲ್ಲಿ ನನ್ನ ದೊಡ್ಡಪ್ಪ, ನಮ್ಮ ತಂದೆಯ ಭಾಗವನ್ನು ನಮಗೆ ಕೊಡಬೇಕು ಎಂದು ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ ಸರಿ. ಸದರಿ ಆದೇಶದ ವಿರುದ್ಧ ನನ್ನ ದೊಡ್ಡಪ್ಪ ಆರ್ ಎ 5/1992 ಎಂದು ಅಪೀಲು ಸಲ್ಲಿಸಿದ್ದ ಎಂದರೆ ಸರಿ. ಸದರಿ ಅಪೀಲು ವಜಾ ಆಗಿತ್ತು ಎಂದರೆ ಸರಿ. ಸದರಿ ಎಲ್ಲಾ ವಿಚಾರ ನಮಗೆ ನಮ್ಮ ತಾಯಿ ಮುಖಾಂತರ ತಿಳಿದಿದೆ ಎಂದರೆ ಸರಿಯಲ್ಲ. ಸದರಿ ಕೇಸು ಮತ್ತು ಅಪೀಲಿನ ಮಾಹಿತಿ ನನಗೆ ಇಲ್ಲ. ಆ ಕೇಸುಗಳು ಯಾವ ರೀತಿ ಕೊನೆಗೊಂಡವು ಎಂದು ನನಗೆ ಗೊತ್ತಿಲ್ಲ, ನನ್ನ ತಾಯಿಗೆ ಗೊತ್ತಿರುತ್ತೆ.

5. ನನ್ನ ತಾಯಿ ಆಕೆಯ ತವರುಮನೆಯಲ್ಲಿ ಅಣ್ಣನ ಮಕ್ಕಳ ಜೊತೆ ವಾಸ ಇದ್ದಾಳೆ. ನನ್ನ ತಾಯಿಯನ್ನು ನಾನಾಗಲಿ, ನನ್ನ ತಂಗಿಯಾಗಲಿ ನೋಡಿಕೊಂಡು ಹೋಗುತ್ತಿಲ್ಲ ಎಂದರೆ ಸರಿ. ನನ್ನ ತಾಯಿಯ ಉಪಜೀವನದ ಖರ್ಚನ್ನು ಆಕೆಯ ಅಣ್ಣನ ಮಕ್ಕಳು ನೋಡಿಕೊಳ್ಳುತ್ತಾರೆ. ನನ್ನ ತಾಯಿಯನ್ನು ನೋಡಿಕೊಳ್ಳಲು ಯಾರು ಇಲ್ಲ. ನಾನು, ನನ್ನ ತಾಯಿ ಒಂದೇ ಊರಲ್ಲಿ ವಾಸ ಇದ್ದೇವೆ ಎಂದರೆ ಸರಿ. ಒಂದು ಓಣಿಯಲ್ಲಿ ನಾನು, ಇನ್ನೊಂದು ಓಣಿಯಲ್ಲಿ ನನ್ನ ತಾಯಿ ವಾಸ ಇದ್ದೇವೆ. ನನ್ನ ತಾಯಿಯ

ಮನೆಯಲ್ಲಿ ಏನೇ ಘಟನೆ ಆಗಲಿ ನನಗೆ ಗೊತ್ತಾಗುತ್ತದೆ. ನನ್ನ ತಾಯಿಯ ಆರೋಗ್ಯ ಏರುಪೇರು ಆದರೆ ಆಕೆಯ ಅಣ್ಣನ ಮಕ್ಕಳೇ ನೋಡಿಕೊಂಡು ಹೋಗುತ್ತಾರೆ. ನನ್ನ ತಾಯಿಗೆ ಈಗ ಅಂದಾಜು 80 ವರ್ಷದ ಮೇಲೆ ಆಗಿವೆ. ನನ್ನ ತಾಯಿಗೆ ಕಣ್ಣು ಕಾಣಿಸುತ್ತದೆ, ಕಿವಿ ಕೇಳಿಸುತ್ತದೆ, ಸ್ವಯಂ ಆಗಿ ನಡೆದುಕೊಂಡು ಬರುತ್ತಾಳೆ. ನನ್ನ ತಾಯಿ ದಿನನಿತ್ಯದ ಕೆಲಸಗಳನ್ನು ಹಾಗೂ ತನ್ನ ಸ್ವಂತ ಕೆಲಸಗಳನ್ನು ಕ್ರಿಯಾಕರ್ಮಗಳನ್ನು ತಾನೇ ಮಾಡಿಕೊಳ್ಳುತ್ತಾಳೆ.

6. ನಮ್ಮ ತಂದೆ, ನಾವು ಚಿಕ್ಕವರಿದ್ದಾಗ ತೀರಿಕೊಂಡ ಕಾರಣ ನಮ್ಮ ಸೋದರಮಾವ ನನ್ನನ್ನು, ನನ್ನ ತಂಗಿಯನ್ನು ಮತ್ತು ತಾಯಿಯನ್ನು ಶಾಖಾಪೂರಕ್ಕೆ ಕರೆದುಕೊಂಡು ಬಂದು ಇರಲು ಒಂದು ಮನೆ ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಮೇಟಿ ಅವರ ಖುಲ್ಲಾ ಜಾಗ, ಉತ್ತರಕ್ಕೆ ಮಾನಪ್ಪ ಅವರ ಮನೆ, ದಕ್ಷಿಣಕ್ಕೆ ಹನಮಪ್ಪ ಬುರ್ಲಿ ಅವರ ಮನೆ ಇದೆ. ಸದರಿ ಮನೆಯಲ್ಲಿ ನನ್ನ ತಾಯಿ ವಾಸ ಇದ್ದಾಳೆ. ಸದರಿ ಮನೆ ಸಂಖ್ಯೆ 70 ಎಂದರೆ ಸರಿ.

7. ನನ್ನ ಗಂಡ ನನ್ನ ತಾಯಿಯ ಕಡೆ ಸಂಬಂಧಿಕ ಅಲ್ಲ. ನನಗೆ 15 ವರ್ಷ ವಯಸ್ಸಿನಲ್ಲಿ ಮದುವೆ ಮಾಡಿಕೊಟ್ಟಿರುತ್ತಾನೆ. ನನ್ನ ಗಂಡನ ಮನೆಯ ಕಡೆ ಆಸ್ತಿಯನ್ನು ಅವರು ಮೊದಲೇ ಮಾರಾಟ ಮಾಡಿರುತ್ತಾರೆ. ನನ್ನ ಮದುವೆ ಆದ ಮೇಲೆ ನನ್ನ ಗಂಡ, ನಾನು ಕೂಲಿ ಮಾಡಿಯೇ ಜೀವನ ಮಾಡಿರುತ್ತೇವೆ. ಸಾಕ್ಷಿಯು ಮುಂದುವರೆದು ನನ್ನ ಗಂಡ ಕೆರೂಬಾಯಿ ಅವರ ಮನೆಯಲ್ಲಿ ಸಂಬಳಕ್ಕೆ ದುಡಿದಿರುತ್ತಾನೆ. ನನ್ನ ಮದುವೆ ಮುಂಚಿತದಿಂದ ಆತ ದುಡಿಯುತ್ತಾ ಇದ್ದ. ಸದರಿ ವಿಚಾರ ನನಗೆ ವೈಯಕ್ತಿಕ ಮಾಹಿತಿ ಇದೆ. ನನ್ನ ಮದುವೆಗೆ ಮುಂಚಿತವಾಗಿ ಆತ 4-5 ವರ್ಷದಿಂದ ಕೆಲಸ ಮಾಡುತ್ತಿದ್ದ, ಮದುವೆ ಆದ ನಂತರ 4-8 ವರ್ಷ ಮಾಡಿರುತ್ತಾನೆ.

ಡಿ.ಡಬ್ಲೂ-1

ಸದರಿ ಕೇರುಬಾಯಿ ಅವರ ಹೊಲವನ್ನು ಕೋರು ಆಧಾರದ ಮೇಲೆ ಅಂದರೆ ಮನುಷ್ಯನಿಗೆ ಇಂತಿಷ್ಟು ಕಾಳು ಎಂದು ದುಡಿದಿರುತ್ತೇವೆ. ಆ ಜಮೀನು 3 ಎಕರೆ ಇತ್ತು, ಅದರ ಸರ್ವೆ ನಂಬರ ಗೊತ್ತಿಲ್ಲ. ಆ ಜಮೀನು ಒಣಬೇಸಾಯದ ಜಮೀನು ಎಂದರೆ ಸರಿ. ಆ ಜಮೀನು ವರ್ಷಕ್ಕೆ ಎಷ್ಟು ಬೆಳೆಯುತ್ತಿತ್ತು, ಎಷ್ಟು ಖರ್ಚಾಗುತ್ತಿತ್ತು ಮತ್ತು ಎಷ್ಟು ಉಳಿಯುತ್ತಿತ್ತು ಎಂದು ನನಗೆ ಗೊತ್ತಿಲ್ಲ, ಆ ವಿಚಾರ ನನ್ನ ಗಂಡ ಮತ್ತು ಮಕ್ಕಳಿಗೆ ಗೊತ್ತಿದೆ. ಖರ್ಚು ವೆಚ್ಚದ ಆದಾಯದ ಬಗ್ಗೆ ಲೆಕ್ಕ ಇಟ್ಟಿಲ್ಲ. ಆ ರೀತಿ ತೋರಿಸಲು ಯಾವುದೇ ದಾಖಲೆ ಇಲ್ಲ.

8. ನನ್ನ ಜನ್ಮ ದಿನಾಂಕದ ದಾಖಲೆಗಳು ಇಲ್ಲ. ನನ್ನ ಮದುವೆ ದಿನಾಂಕದ ದಾಖಲೆಗಳು ಇಲ್ಲ. ನನ್ನ ಮದುವೆ ಮುಂಚಿತವಾಗಿ ನನ್ನ ಗಂಡನ ಕುಟುಂಬಕ್ಕೆ ಇದ್ದ ಖರ್ಚು ವೆಚ್ಚ, ಆದಾಯದ ಬಗ್ಗೆ ಹೇಳಲು ಬರುವುದಿಲ್ಲ ಹಾಗೂ ದಾಖಲೆಗಳು ಇಲ್ಲ. ನನ್ನ ಮದುವೆ ಆದ ನಂತರ ನನ್ನ ಕುಟುಂಬದ ಖರ್ಚು ವೆಚ್ಚ ಆದಾಯದ ಬಗ್ಗೆ ಹೇಳಲು ಆಗುವುದಿಲ್ಲ ಮತ್ತು ದಾಖಲೆ ಇಲ್ಲ ಸಾಕ್ಷಿಯು ಮುಂದುವರೆದು ನನ್ನ ಮನೆತನದ ಹಿರಿತನವನ್ನು ನನ್ನ ಗಂಡ ಮಾಡುತ್ತಾನೆ ಎಂದು ನುಡಿಯುತ್ತಾರೆ.

(ಮುಂದಿನ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನವನ್ನು ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕುಷ್ಟಗಿ